# ಬೆಳಗಿನ ಅಂದಕೆ

■ ನಾಗರಾಜ ಬಿ.ನಾಯ್ಕ, ಹುಬ್ಬಣಗೇರಿ
ಕಲೆ: ಸಂತೋಷ್ ಸಸಿಹಿತ್ಲು

ಬೆಳಗಿನ ಅಂದಕೆ
ಹೂವದು ಚೆಂದ
ಬಣ್ಣದ ನಗುವಿಗೆ
ಬೆಳಕದು ಅಂದ

ಚಿಟ್ಟೆಯ ಕುಣಿತ
ರೆಕ್ಕೆಯ ಬಡಿತ
ಹಾರಿದ ಹಕ್ಕಿಯ
ಚುಕ್ಕಿಯ ಗಣಿತ


ಹೂವಿನ ತೇರು
ಚೆಂದದ ಸಾಲು
ಪ್ರೀತಿಯ ಸಾರುವ
ಹಕ್ಕಿಯ ಟಪಾಲು

ಮೋಡದ ಉಯಿಲು
ಗದ್ದೆಯ ಬಯಲು
ಮಣ್ಣಲಿ ಬೇರು
ಉಸಿರಲಿ ಹಸಿರು

ನಗುವಿಗೆ ಮೊಗವು
ಹೂವಿನ ಮಗು
ಎಳೆಯ ಚಿಗುರು
ಉಳಿವಿನ ಕೂಗು








## ಕುಂಚ ಪ್ರಪಂಚ

**ಸಾನ್ವಿ ಕುಮಾರ್ ಮಂಚಿ**
6ನೇ ತರಗತಿ, ಸ್ವಾಮಿ ವಿವೇಕಾನಂದ ಶಾಲೆ, ಸೊರಬ





**ಇಶಾನ್ವಿ ಕಂಚೆರ್ಲಾ**
2ನೇ ತರಗತಿ,
ಮಿನ್ನೆಪೊಲಿಸ್, ಅಮೆರಿಕ